## ಸಂಡೂರಿನ ಶಿವ ವಿಲಾಸ ಪ್ಯಾಲೇಸ್



ಹುಲಿ ಉಗುರಿನ ಕಥೆ ರಾಜ್ಯಕ್ಕೆ ತಿಳಿದಿದೆ. ವನ್ಯಜೀವಿ ಅಂಗಾಂಗಗಳ ಅವಶೇಷ ಮರಳಿಸಲು ರಾಜ್ಯ ಸರ್ಕಾರ ಮತ್ತೊಮ್ಮೆ ಅವಕಾಶ ಕಲ್ಪಿಸಿದೆ. ಇದೆಂಥಾ ವಿಪರ್ಯಾಸ ನೋಡಿ. ಹುಲಿ ಉಗುರು ಸೇರಿದಂತೆ ವನ್ಯಜೀವಿ ಅಂಗಾಂಗಗಳ ವಾಪಸಾತಿ ಎಷ್ಟು ಸಮಂಜಸ? ಬ್ರಿಟಿಷರ ಕಾಲದಲ್ಲಿ ಶಿಕಾರಿ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಆಗ ಬೇಟೆಗಾರನಿಗೆ ಮೆರವಣಿಗೆ ಮಾಡಿ ಬಕ್ಷೀಸು ಕೊಡುತ್ತಿದ್ದರು. ಇದು ನೂರಾರು ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತ ಬಂದಿದ್ದು, ವನ್ಯ ಪ್ರಾಣಿಗಳ ಅವಶೇಷಗಳು ಇಂದಿಗೂ ಕೆಲ ಶ್ರೀಮಂತರ ಮನೆಯಲ್ಲಿ, ರಾಜರ ಅರಮನೆಯಲ್ಲಿ ಶೋಭಾಯಮನವಾಗಿ ನಿಂತಿವೆ. ಅದರಲ್ಲಿ ಸಂಡೂರು ಮಹಾರಾಜರಾದ ಶ್ರೀ ಘೋರ್ಪಡೆಯವರ ಶಿವ ವಿಲಾಸ ಪ್ಯಾಲೇಸ್ ಸಹ ಒಂದು. ಇಲ್ಲಿ ಜಿಂಕೆ, ಕೋಣ, ಹುಲಿ, ಇತ್ಯಾದಿ ಪ್ರಾಣಿಗಳ ಅಂಗಗಳು ಪ್ರದರ್ಶನಕ್ಕಿವೆ.

—ಎಂ. ಮೃತ್ಯುಂಜಯಪ್ಪ



## ಬೃಹತ್ ಗಾತ್ರದ ಪುಸ್ತಕ

ಅಮೆರಿಕದ ಮೆಸಾಚ್ಯುಸೆಟ್ಸ್ ರಾಜ್ಯದ ‘ಸ್ಪ್ರಿಂಗ್ ಫೀಲ್ಡ್’ನಲ್ಲಿರುವ ಐದು ಮ್ಯೂಸಿಯಂಗಳ ಸಮೂಹ ‘ಕ್ವಾಡ್ರ್ಯಾಂಗಲ್’ನ ಮಧ್ಯಭಾಗದಲ್ಲಿ ಡಾ. ಸೋಯ್ಸ್ ನ್ಯಾಷನಲ್ ಮೆಮೋರಿಯಲ್ ಸ್ಕಲ್ಪ್ಚರ್ ಗಾರ್ಡನ್ ಇದೆ.

ಸ್ಪ್ರಿಂಗ್ ಫೀಲ್ಡ್‌ನಲ್ಲಿ ಜನಿಸಿದ ಥಿಯೋಡರ್ ಸೋಯ್ಸ್ ಗೀಸೆಲ್ (ಡಾ. ಸೋಯ್ಸ್) ಮಕ್ಕಳ ಕಥೆ ಪುಸ್ತಕಗಳ ಬರಹಗಾರ, ರಾಜಕೀಯ ವ್ಯಂಗ್ಯಚಿತ್ರಕಾರ ಹಾಗೂ ಅನಿಮೇಟರ್ ಆಗಿದ್ದು, ಅವರ ಸ್ಮರಣಾರ್ಥ ‘ಸ್ಕಲ್ಪ್ಚರ್ ಗಾರ್ಡನ್’ ನಿರ್ಮಿಸಲಾಗಿದೆ. ಡಾ. ಸೋಯ್ಸ್ ಬರೆದ ಕಥೆಗಳಲ್ಲಿ ಬರುವ ಕಾಲ್ಪನಿಕ ಪಾತ್ರಗಳ ಕಂಚಿನ ಶಿಲ್ಪಗಳೂ ಇಲ್ಲಿವೆ. ಈ ಉದ್ಯಾನವನದಲ್ಲಿರುವ ಬೃಹತ್ ಗಾತ್ರದ ಪುಸ್ತಕ ಕಲಾಕೃತಿಯು ಪ್ರವಾಸಿಗರನ್ನು ಆಕರ್ಷಿಸುತ್ತದೆ. ಕತೆ ಹೇಳುವಾಗ ಕುಳಿತುಕೊಳ್ಳಲು ಕುರ್ಚಿ, ಹಿಂಭಾಗದಲ್ಲಿ **Oh the places you'll go!** ಎಂಬ ಬರಹವುಳ್ಳ, ಕಂಚಿನಿಂದ ತಯಾರಿಸಲಾದ ಈ ಪುಸ್ತಕವು 10 ಅಡಿ ಎತ್ತರವಿದೆ. ಪುಸ್ತಕದ ಎಡಭಾಗದಲ್ಲಿ ಎರಡು ಶಿಲ್ಪಗಳು ನಿಂತಿರುವ ಭಂಗಿಯಲ್ಲಿದ್ದು, ಪುಸ್ತಕದ ಮೇಲ್ಭಾಗದಲ್ಲಿ ಇಣುಕಿ ನೋಡುತ್ತಿರುವ ಒಂದು ಶಿಲ್ಪವಿದೆ. ಇಲ್ಲಿಗೆ ಬಂದ ನೆನಪಿಗಾಗಿ ಪ್ರವಾಸಿಗರು ಪುಸ್ತಕದ ಮುಂದಿರುವ ಕುರ್ಚಿಯಲ್ಲಿ ಕುಳಿತು ಫೋಟೊ ತೆಗೆಸಿಕೊಳ್ಳುತ್ತಾರೆ.

—ಜಿ. ನಾಗೇಂದ್ರ, ಕಾವೂರು, ಸಂಡೂರು

## ಮುಗಿಲು ಸ್ಪರ್ಶಿಸುವ ಜೋಡಿ ಕಲ್ಲುಗಳು

ಬಾಲ್ಯದಲ್ಲಿ ಅಜ್ಜಿ ಹೇಳುತ್ತಿದ್ದ ಕಥೆಗಳಲ್ಲಿ ಅಗೋಳಿ ಮಂಜಣ್ಣನ ಕಥೆಯು ಕರಾವಳಿಯ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬಲು ಜನಪ್ರಿಯವಾಗಿತ್ತು. ತಿಂಡಿಪೋತನಾಗಿದ್ದ ಆತ ಮೆಲ್ಲುತ್ತಿದ್ದ ಇಡ್ಲಿ ಕೊಣಾಜೆ ಕಲ್ಲಿನಷ್ಟು ದೊಡ್ಡದಾಗಿರುತ್ತಿತ್ತೆಂದು ಅಜ್ಜಿ ಹೇಳುತ್ತಿದ್ದಾಗ ನಾವು ಮನೆಯಿಂದ ಕೆಲವು ಕಿ.ಮೀ.ಗಳ ದೂರದಲ್ಲಿ ದೃಷ್ಟಿಗೆ ನಿಲುಕುತ್ತಿದ್ದ ಜೋಡಿ ಕೊಣಾಜೆ ಕಲ್ಲುಗಳನ್ನು ಆಸೆಭರಿತ ಕಂಗಳಿಂದ ವೀಕ್ಷಿಸುತ್ತಿದ್ದೆವು.

ಈಗ ಸ್ಥಳೀಯ ಟ್ರೆಕ್ಕಿಗರ ಸ್ವರ್ಗವೆನಿಸಿರುವ ಕೊಣಾಜೆ ಕಲ್ಲು ದಕ್ಷಿಣಕನ್ನಡ ಜಿಲ್ಲೆಯ ಮೂಡಬಿದಿರೆಯ ಬಳಿಯಿದೆ. ಸಮುದ್ರ ಮಟ್ಟದಿಂದ 344 ಮೀಟರ್ ಎತ್ತರದಲ್ಲಿರುವ ಸದ್ರಿ ಬೃಹತ್ ಬಂಡೆಗಳನ್ನು ಏರುವುದು ಸಾಹಸಮಯ ಕೆಲಸ. ಕಾರಣಿಕ ಕ್ಷೇತ್ರವೆಂದೆನಿಸಿರುವ ಈ ತಾಣದಲ್ಲಿ ಪುರಾತನ ಮಂದಿರವಿದೆ. ದಟ್ಟ ಅರಣ್ಯದ ನಡುವೆ ಸಾಗುವ ಚಾರಣಿಗರ ದಾರಿಯು ಒಂದು ಗುಹೆ ಹಾಗೂ ಬೂದಿಕೆರೆಯೆಂಬ ಪವಿತ್ರ ಕೆರೆಯನ್ನು ಒಳಗೊಂಡಂತೆ ವಿಹಂಗಮ ನೋಟದ ರೋಚಕ ಅನುಭವ ನೀಡುತ್ತದೆ. ಗುಹೆಯೊಳಗೆ ಹಿಂದೆ ಬ್ರಹ್ಮರಾಕ್ಷಸ ನೆಲೆಸಿದ್ದನೆಂದು ಅಜ್ಜಿ ಕಥೆ ಹೇಳುತ್ತಿದ್ದರು. ಅದೇನಿದ್ದರೂ ಈ ಕ್ಷೇತ್ರವನ್ನು ಸಂದರ್ಶಿಸುವುದು ಧಾರ್ಮಿಕ ದೃಷ್ಟಿಯಿಂದಲೂ ಸ್ಥಳೀಯರಿಗೆ ವಿಶೇಷ ತಾಣವಾಗಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

